8. ಹೀಗೆ ಗುಂಡಿಗಳಲ್ಲಿ ಸಂಗ್ರಹಿಸಿದ ಮೇವು ಸುಮಾರು ಎರಡು ತಿಂಗಳವರಗೆ ಬಿಡಬೇಕಾಗುತ್ತದೆ.
9. ಕಡಿಮೆಯಂದರೆ ಮೂರುವಾರಗಳಲ್ಲಿ ರಸಮೇವು ತಯಾರಾಗುವುದು. ಅನಂತರ ಮೇವನ್ನು ಹೊರತೆಗೆದ ಮೇಲೆ ಎಲ್ಲಾ ಮೇವನ್ನು ಪದರ ಪದರವಾಗಿ ದಿನವು ಹೊರ ತೆಗೆದು 45–50 ದಿವಸಗಳಲ್ಲಿ ಖಾಲಿ ಮಾಡಬೇಕು.
10. ಬಂಗಾರದ ಹಳದಿ ಬಣ್ಣ, ತೀಕ್ಷ್ಣವಾದ ಆಮ್ಲ ಮತ್ತು ಹಣ್ಣಿನ ವಾಸನೆ ಇವು ರಸಮೇವಿನ ಮುಖ್ಯವಾದ ಲಕ್ಷಣಗಳು.
11. ತಯಾರಾದ ರಸಮೇವನ್ನು ಒಂದು ದಿನಕ್ಕೆ 10 ಕೆ.ಜಿ ಯಷ್ಟು ಪ್ರತಿ ರಾಸುಗೆ ಕೊಡಬಹುದು.

**ಮೊದಲ ಬಾರಿ ರಸ ಮೇವು ತಿನ್ನಿಸುವ ರೀತಿ:** ಪಶುಗಳು ರಸಮೇವಿನ ವಾಸನೆಗೆ ಹೊಂದಿಕೊಳ್ಳಲು ಸ್ವಲ್ಪ ಸಮಯ ತೆಗೆದುಕೊಳ್ಳಬಹುದು. ಕ್ರಮೇಣ ಹೆಚ್ಚು ಹೆಚ್ಚು ಮೇವನ್ನು ತಿನ್ನುವವು. ಹಾಲು ಕೊಡುವ ಪಶುಗಳಿಗೆ ಹಾಲು ಕರೆದ ನಂತರ ರಸಮೇವನ್ನು ಕೊಡಬೇಕು. ಏಕೆಂದರೆ ಹಾಲಿನಲ್ಲಿ ರಸಮೇವಿನ ವಾಸನೆ ಬರುವ ಸಾಧ್ಯತೆ ಇರುತ್ತದೆ.

**ರಸಮೇವಿನ ಉಪಯೋಗಗಳು:**

1. ಉತ್ತಮವಾದ ರಸಮೇವು ಹಸಿರುಮೇವು ಸಿಗದೆ ಇರುವ ವೇಳೆಯಲ್ಲಿ ಹಾಲು ಕೊಡುವ ಪಶುಗಳಿಗೆ ಅತ್ಯಂತ ಉಪಯುಕ್ತ.
2. ರಸಮೇವು ತಯಾರಿಕೆಯು ಹವಾಮಾನದ ಬದಲಾವಣೆ ವ್ಯತ್ಯಾಸದ ಮೇಲೆ ಅವಲಂಬಿಸಿರುವುದಿಲ್ಲ.
3. ರಸಮೇವನ್ನು ಸರಿಯಾಗಿ ಸಂಗ್ರಹಿಸಿದ್ದಾಗ ಅದರಲ್ಲಿ ಇರುವ ಎಲ್ಲಾ ಅವಶ್ಯಕ ಪೋಷಕಾಂಶಗಳು ಬಹಳ ದಿನಗಳವರಗೆ ಉಳಿಯುತ್ತವೆ.
4. ದಪ್ಪಕಾಂಡ ಇರುವ ಮೇವುಗಳನ್ನು ಒಳ್ಳೆಯ ಗುಣಮಟ್ಟದ ರಸಮೇವನ್ನಾಗಿ ಪರಿವರ್ತಿಸಬಹುದು.
5. ಮೇವಿನ ಪೌಷ್ಟಿಕತೆಯನ್ನು ಕೆಲವೊಂದು ವಸ್ತುಗಳಿಂದ ಮಿಶ್ರಣ ಮಾಡಿ ಹೆಚ್ಚಿಸಬಹುದು. ರಸಮೇವು ಮಾಡುವುದರಿಂದ ಮೇವಿನ ಪಚನ ಶಕ್ತಿಯನ್ನು ಹೆಚ್ಚಿಸಬಹುದು.



ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ
ವಿಶ್ವವಿದ್ಯಾಲಯ, ಬೀದರ

ಭಾ.ಕೃ.ಸಂ.ಪ. – ಕೃಷಿ ವಿಜ್ಞಾನ ಕೇಂದ್ರ, ದ.ಕ., ಕಂಕನಾಡಿ, ಮಂಗಳೂರು – 575 002

# ಮೇವಿನ ಬೆಳೆಗಳ ಉತ್ಪಾದನೆ ಹಾಗೂ ಸಂಗ್ರಹಣೆ

ಲೇಖಕರು

ಡಾ. ನವೀನ್ ಕುಮಾರ್

ಬಿ. ಟಿ., ಡಾ. ಟಿ. ಜೆ. ರಮೇಶ

ಡಾ. ಶಿವಕುಮಾರ್

ಆರ್., ಡಾ. ಕೇದರನಾಥ

ಡಾ. ಮಲ್ಲಿಕಾರ್ಜುನ, ಎಲ್.

ಡಾ. ಚೇತನ್, ಎನ್.

ಡಾ. ರಶ್ಮಿ

ಪಶುಗಳಿಗೆ ಒದಗಿಸುವ ಒಟ್ಟು ಆಹಾರದಲ್ಲಿ ಶೇ. 60–100 ರಷ್ಟು ಭಾಗ ಮೇವಾಗಿರುತ್ತದೆ. ಪಶುಗಳಿಗೆ ಪೂರೈಸುವ ಒಟ್ಟು ಮೇವಿನಲ್ಲಿ ಶೇ. 65 ಭಾಗ ಉತ್ತಮ ದರ್ಜೆಯ ಏಕದಳ ಹಸಿರು ಮೇವು ಹಾಗೂ ಶೇ. 35 ಭಾಗ ಒಳ್ಳೆಯ ದ್ವಿದಳ ಹಸಿರು ಮೇವಾಗಿದ್ದರೆ ಜಾನುವಾರುಗಳಿಗೆ ಸಮತೋಲನ ಆಹಾರ ಒದಗಿಸಿದಂತಾಗುತ್ತದೆ ಮತ್ತು ಇದರಿಂದ ಪ್ರತಿ ದಿನ 5–6 ಲೀ. ಗಳ ವರೆಗೆ ಹಾಲನ್ನು ಪಡೆಯಬಹುದು. ಪ್ರಸ್ತುತ ಕರಾವಳಿ ಭಾಗದಲ್ಲಿ ಬೇಸಿಗೆಯಲ್ಲಿ ಹಸಿರು ಮೇವಿನ ಕೊರತೆಯಿಂದ ಶೇ. 90 ಭಾಗ ರೈತರು ಪಶು ಆಹಾರದ ಮೇಲೆ ಅವಲಂಬಿತರಾಗಿದ್ದಾರೆ ಕಾರಣ ರೈತರಿಗೆ ಹೈನುಗಾರಿಕೆಯಲ್ಲಿ ಹೆಚ್ಚಿನ ಆದಾಯ ಸಿಗುತ್ತಿಲ್ಲ. ಆದ್ದರಿಂದ ಮೇವಿನ ಬೆಳೆಗಳು, ಸಾಗುವಳಿ ಕ್ರಮಗಳು ಹಾಗೂ ಅವುಗಳ ಸಂಗ್ರಹಣೆಯ ಬಗ್ಗೆ ತಿಳಿದುಕೊಳ್ಳುವುದು ಅತಿ ಮುಖ್ಯವಾಗಿದೆ.

**ಅ. ಏಕದಳ ಮೇವಿನ ಬೆಳೆಗಳು:**

ಏಕವಾರ್ಷಿಕ ಮೇವಿನ ಬೆಳೆಗಳು: ಮೇವಿನ ಮುಸುಕಿನ ಜೋಳ, ಮೇವಿನಜೋಳ, ಮೇವಿನ ಸಜ್ಜೆ

ಬಹುವಾರ್ಷಿಕ ಮೇವಿನ ಬೆಳೆಗಳು: ಹೈಬ್ರಿಡ್ ನೇಪಿಯರ್ ಹುಲ್ಲು, ಗಿನಿಹುಲ್ಲು, ರ್‍ಹೋಡ್ಸ್ ಹುಲ್ಲು,

ಪ್ಯಾರಾಹುಲ್ಲು, ಕಾಂಗೋ ಮತ್ತು ಸಿಗ್ನಲ್ ಹುಲ್ಲುಗಳು

**ಆ. ದ್ವಿದಳ ಮೇವಿನ ಬೆಳೆಗಳು:**

ಏಕವಾರ್ಷಿಕ ಮೇವಿನ ಬೆಳೆಗಳು: ಮೇವಿನ ಅಲಸಂದಿ, ಮೇವಿನ ಹುರುಳಿ, ಮೇವಿನ ಅವರೆ ಬಹುವಾರ್ಷಿಕ ಮೇವಿನ ಬೆಳೆಗಳು: ಕುದುರೆ ಮೆಂತೆ, ಸ್ಟೈಲೋಸ್ಯಾಂಥಸ್

**ಇ. ಮೇವಿನ ಗಿಡ ಮರಗಳು:** ಚೊಗಚೆ, ನುಗ್ಗೆ, ಸೂಬಾಬುಲ್, ಕ್ಯಾಲಿಯಾಂಡ್ರಾ, ಗೊಬ್ಬರಗಿಡ

**ಸಾಮಾನ್ಯ ಸಲಹೆಗಳು:**

- ಪ್ರತಿ ಎಕರೆಗೆ 10 ಟನ್ ಕೊಳೆತ ಹಟ್ಟಿಗೊಬ್ಬರವನ್ನು ಭೂಮಿಗೆ ಬೆರಸಿ ಹದವಾಗಿ ಉಳುಮೆ ಮಾಡಬೇಕು.
- ಬೀಜ, ಬೇರು ಮತ್ತು ಕಾಂಡಗಳನ್ನು ನಾಟಿ ಅಥವಾ ಬಿತ್ತನೆ ಮಾಡುವ ಮುಂಚೆ ರಸಗೊಬ್ಬರಗಳನ್ನು ಸಾಲಿನಲ್ಲಿ ಸೇರಿಸಬೇಕು.
- ಮೊಳಕೆ ಅಥವಾ ಚಿಗುರುವ ಸಮಯದಲ್ಲಿ ಸರಿಯಾದ ಪ್ರಮಾಣದಲ್ಲಿ ಮಣ್ಣಿನ ತೇಂವಾಶವನ್ನು ಕಾಪಾಡಬೇಕು.
- ಬಹು ಕಟಾವಿನ ಮೇವಿನ ಬೆಳೆಗಳಲ್ಲಿ ಪ್ರತಿ ಕಟಾವಿನ ನಂತರ ಸಾರಜನಕವನ್ನು ಮೇಲುಗೊಬ್ಬರವಾಗಿ ಕೊಟ್ಟು ನೀರನ್ನು ಹಾಯಿಸಬೇಕು.
- ಏಕದಳ ಮೇವಿನ ಬೆಳೆಗಳಲ್ಲಿ ಆಮ್ಲಿಯ (ಆಗ್ಸಾಲರಿಕ್ ಆಸಿಡ್) ಅಂಶವು ಇರುವದರಿಂದ ಪಶುಗಳಲ್ಲಿ ಕಿಡ್ನಿಯ ತೊಂದರೆ ಭಾದಿಸುತ್ತದೆ. ಆದ್ದರಿಂದ ಏಕದಳ ಮೇವುಗಳ ಜೊತೆ ದ್ವಿದಳ ಮೇವಿನ ಬೆಳೆಗಳನ್ನು ಕೊಡುವುದರಿಂದ ಕಿಡ್ನಿ ತೊಂದರೆ ತಪ್ಪಸಬಹುದು ಹಾಗೂ ಹಾಲಿನ ಉತ್ಪಾದನೆ ಮತ್ತು ಗುಣಮಟ್ಟವನ್ನು ಹೆಚ್ಚಿಸಬಹುದು.



ಸುಮಾರು 65–70% ರಷ್ಟು ಇರಬೇಕು. ದಪ್ಪಕಾಂಟ ಉಳ್ಳ ಮೇವುಗಳನ್ನು ಒಳ್ಳೆಯ ಗುಣಮಟ್ಟದ ರಸಮೇವನ್ನಾಗಿ ಪರವರ್ತಿಸಬಹುದು. ರಸಮೇವು ಮಾಡುವಾಗ ಹಾಲುಕಾಳಿನ ತೆನೆಗಳು ಇಲ್ಲದಿದ್ದರೆ ರಸಮೇವು ಗುಣಮಟ್ಟ ಕಡಿಮೆಯಾಗುತ್ತದೆ.

**ರಸಮೇವು ತಯಾರಿಸುವ ವಿಧಾನ:**

1. ಧೂಳು ಮುಕ್ತ ಮತ್ತು ಒಣಗಿದ ಸೈಲೋ ಗುಂಡಿಯಲ್ಲಿ 1–2 ಇಂಚು ಉದ್ದವಿರುವಂತೆ ಕತ್ತರಿಸಿದ ಮೇವನ್ನು ಚೆನ್ನಾಗಿ ಮೇಲಿನಿಂದ ಅದುಮಿ ಶೇಖರಿಸಬೇಕು.
2. ಪ್ರತಿ ಸಮ ಪದರದ ಮೇಲೆ ಉಪ್ಪನ್ನು ತೆಳುವಾಗಿ ಹಾಕಬೇಕು. ಇದಲ್ಲದೇ ಕಾಕಂಬಿ ಅಥವಾ ಬೆಲ್ಲದ ನೀರನ್ನು ಉಪಯೋಗಿಸಬಹುದು.
3. ಹಸಿರಿನ ಮೇವು ಹೆಚ್ಚು ಬತ್ತಿದ್ದರೆ, ಶೇ. 5–10 ರ ಪ್ರಮಾಣದಲ್ಲಿ ಕಾಕಂಬಿಯನ್ನು ನೀರಿನಲ್ಲಿ ಕದಡಿ ಉಪಯೋಗಿಸಬಹುದು. ಇದರಿಂದ ಮೇವು ರುಚಿ ಹೆಚ್ಚುವುದರ ಜೊತೆಗೆ ಪಶುಗಳಿಗೆ ಅಗತ್ಯವಾದ ಲ್ಯಾಕ್ಟಿಕ್ ಆಮ್ಲದ ಉತ್ಪಾದನೆ ಹೆಚ್ಚಿಸುತ್ತದೆ.
4. ಈ ರೀತಿಯಾಗಿ ಗುಂಡಿಯಿಂದ ಸುಮಾರು 3 ಅಡಿಗೂ ಎತ್ತರವಿರುವಂತೆ ಮೇವನ್ನು ತುಂಬಿ ನಂತರ ಮೇಲು ಭಾಗದಲ್ಲಿ ಕತ್ತರಿಸಿದ ಉದ್ದನೆಯ ಹಸಿಮೇವಿನಿಂದ ಮುಚ್ಚಿ, ಇದರ ಮೇಲೆ ಒಂದು ಅಡಿಗೂ ಹೆಚ್ಚು ಪ್ರಮಾಣದಲ್ಲಿ ಮಣ್ಣನ್ನು ಹರಡಿ ಚೆನ್ನಾಗಿ ತೊಳೆದು ನಂತರ ಸಗಣಿಯಿಂದ ಸಾರಿಸಬೇಕಾಗುತ್ತದೆ.
5. ಮುಚ್ಚಿದ ಮೇವಿನ ಗುಂಡಿಯಲ್ಲಿ ಒಂದೆರಡು ವಾರದಲ್ಲಿ ಮೇವು ಕುಸಿದು ಅಲ್ಲಲ್ಲಿ ಬಿರಿಕುಗಳು ಬರುತ್ತದೆ. ಹಾಗೂ ನಿರ್ಮಾಣವಾದ ಬಿರುಕುಗಳನ್ನು ಮತ್ತೆ ಸ್ವಲ್ಪ ಮಣ್ಣು ಹಾಕಿ ಮುಚ್ಚಬೇಕು. ಒಟ್ಟಾರಯಾಗಿ, ಗಾಲಿಯು ಗುಂಡಿಗಳನ್ನು ಸೇರದಂತೆ ಎಚ್ಚರವಹಿಸಬೇಕು.
6. ಈ ರೀತಿ ಮುಚ್ಚಿದ ಮೇಲಿನ ಗುಂಡಿಯಲ್ಲಿ ಲ್ಯಾಕ್ಟೋಬೆಸಿಲಸ್ ಸೂಕ್ಷ್ಮ ಜೀವಾಣುಗಳು ಮೇವಿನಲ್ಲಿರುವ ಪಿಷ್ಟ ಪದಾರ್ಥಗಳನ್ನು ಉಪಯೋಗಿಸಿಕೊಂಡು ಲ್ಯಾಕ್ಟಿಕ್ ಆಮ್ಲ ಉತ್ಪತ್ತಿಯಾಗುತ್ತದೆ. ಈ ಆಮ್ಲ ಮೇವನ್ನು ಕೆಡದಂತೆ ಕಾಪಾಡುತ್ತದೆ.
7. ಸೈಲೇಜ್ ಗುಂಡಿಗಳಲ್ಲಿ ಗಾಳಿಯಾಡಿದರೆ ಮೇವು ಕೆಡುತ್ತದೆ ಹಾಗೂ ಕಂದು ಬಣ್ಣದ ತಂಬಾಕಿನ ವಾಸನೆ ಬರುತ್ತದೆ ಮತ್ತು ರಸಮೇವಿನ ಗುಣಮಟ್ಟ ಕಳಪೆಯಾಗುತ್ತದೆ.

## ಮೇವಿನ ಬೆಳೆಗಳ ಉತ್ಪಾದನೆ ತಾಂತ್ರಿಕತೆಗಳು

| ಮೇವಿನ ಬೆಳೆ | ಪೌಷ್ಠಿಕಾಂಶಗಳು | ತಳಿಗಳು | ಬೀಜ ಕೆ.ಜಿ. ಎಕರೆಗೆ | ರಾಸಾಯನಿಕ ಗೊಬ್ಬರಗಳು | ನೀರಾವರಿ | ಕಟಾವಿನ ಸಮಯ | ಹಸಿರು ಮೇವು ಇಳುವರಿ | ಕಟಾವಿನ ಸಂಖ್ಯೆ | ಪ್ರತಿ ಹಸುವಿಗೆ ಕೊಡುವ ಪ್ರಮಾಣ/ದಿನಕ್ಕೆ |
|---|---|---|---|---|---|---|---|---|---|
| ಮುಸುಕಿನ ಜೋಳ | ಪ್ರೋಟಿನ್ – ಶೇ. 11, ಪಿಷ್ಠ– ಶೇ. 51 ಕೊಬ್ಬಿನ ಅಂಶ– ಶೇ. 1 ಲವಣಾಂಶ –ಶೇ. 12, ನಾರಿನ ಅಂಶ – ಶೇ. 25 | ಕ್ಷೀರಾಮೃತ (ಆಫ್ರಿಕನ್‌ಟಾಲ್) | 24 | ಸಾ:ರಂ:ಪೊ 48:24:20 | ಬಿತ್ತನೆ ನಂತರ ಹಾಗು ಪ್ರತಿ ವಾರಕ್ಕೆ | 80–90 ದಿವಸಗಳು | 250 ಕ್ವಿಂ./ಎಕರೆ | 1 | ಹಸಿರು ಮೇವು:25 ಕೆ.ಜಿ. ಒಣ ಹುಲ್ಲು: 6–8 ಕೆ.ಜಿ. |
| ಮೇವಿನ ಜೋಳ | ಪ್ರೋಟಿನ್ – ಶೇ. 10, ಪಿಷ್ಠ– ಶೇ. 50 ಕೊಬ್ಬಿನ ಅಂಶ– ಶೇ. 2 ಲವಣಾಂಶ –ಶೇ. 12, ನಾರಿನ ಅಂಶ – ಶೇ. 25 | ಸಿ.ಓ.ಎಫ್.ಎಸ್ – 29<br>ಸಿ.ಓ.ಎಫ್.ಎಸ್ – 31 | 8 | ಸಾ:ರಂ:ಪೊ 36:18:18 | ಬಿತ್ತನೆ ನಂತರ ಹಾಗು ಪ್ರತಿ 10 ದಿನಕ್ಕೆ | 70–80 ದಿವಸಗಳು | 70–80 ಟನ್/ವರ್ಷ/ಎಕರೆಗೆ | 3–4 | ಹಸಿರು ಮೇವು:20 ಕೆ.ಜಿ. ಒಣ ಹುಲ್ಲು: 60 ಕೆ.ಜಿ. |
| ಮೇವಿನ ಸಜ್ಜೆ | ಪ್ರೋಟಿನ್ ಶೇ. 2.40, ಪಿಷ್ಠ ಶೇ. 48.70, ಕೊಬ್ಬಿನಅಂಶ ಶೇ. 1.30, ಲವಣಾಂಶ ಶೇ. 10.50, ನಾರಿನ ಅಂಶ ಶೇ. 37.10 | ದೀನಬಂಧು (ಡಿಎಫ್‌ಬಿ–1) ಡಿಆರ್‌ಎಸ್‌ಬಿ–2 | 6 | ಸಾ:ರಂ:ಪೊ 40:24:24 | ಬಿತ್ತನೆ ನಂತರ ಹಾಗು ಪ್ರತಿ 10 ದಿನಕ್ಕೆ | 50–55 ದಿವಸಗಳು | 15–20 ಟನ್/ವರ್ಷ/ಎಕರೆಗೆ | 2–3 | ಹಸಿರು ಮೇವು:30 ಕೆ.ಜಿ |
| ನೆಪಿಯರ್ ಹುಲ್ಲು | ಪ್ರೋಟಿನ್ ಶೇ. 6.20, ಪಿಷ್ಠ ಶೇ. 47.50, ಕೊಬ್ಬಿನಅಂಶ ಶೇ. 2.30, ಲವಣಾಂಶ ಶೇ. 16, ನಾರಿನ ಅಂಶ ಶೇ. 28.10 | ಎನ್‌ಬಿ–21, ಬಿಎನ್–2, ಸಿಒ–1, ಸಿಒ–2, ಸಿಒ–3, ಡಿಎಚ್‌ಎನ್–6 | 8–10 ಸಾವಿರ ಬೇರು | ಸಾ:ರಂ:ಪೊ 60:30:20 | ನಾಟಿಯ ನಂತರ ಹಾಗು ಪ್ರತಿ 10 ದಿನಕ್ಕೆ | 50–55 ದಿವಸಗಳು | 80–90 ಟನ್/ವರ್ಷ/ಎಕರೆಗೆ | 5–6 | ಹಸಿರು ಮೇವು:30 ಕೆ.ಜಿ |
| ಗಿನಿಯಾ ಹುಲ್ಲು | ಪ್ರೋಟಿನ್ ಶೇ. 7.70, ಪಿಷ್ಠ ಶೇ 39.40, ಕೊಬ್ಬಿನಅಂಶ ಶೇ. 1.70, ಲವಣಾಂಶ ಶೇ. 13.90, ನಾರಿನ ಅಂಶ ಶೇ. 37.30 | ಸಮೃದ್ಧಿ(ಹ್ಯಾಮಿಲ್), ಗ್ರೀನ್ ಪ್ಯಾನಿಕ್, ನಂದಿನಿ (ರಿವರ್ಸ್‌ಡೇಲ್) | 16,000 ಬೇರು/ 6 ಕೆ.ಜಿ. ಬೀಜ | ಸಾ:ರಂ:ಪೊ 60:30:20 | ನಾಟಿಯ ನಂತರ ಹಾಗು ಪ್ರತಿ 10 ದಿನಕ್ಕೆ | ಹೂ ಬಿಡುವ ಮೊದಲು | 50–60 ಟನ್/ವರ್ಷ/ಎಕರೆಗೆ | 5–6 | ಹಸಿರು ಮೇವು:30 ಕೆ.ಜಿ |
| ಅಲಸಂದಿ | ಪ್ರೋಟಿನ್ ಶೇ. 16.50, ಪಿಷ್ಠ ಶೇ. 39.40, ಕೊಬ್ಬಿನ ಅಂಶ ಶೇ. 3.00, ಲವಣಾಂಶ ಶೇ. 10.30, ನಾರಿನಾಂಶ ಶೇ. 30.90 | ಸ್ವಾದ (ಡಿಎಫ್‌ಸಿ–1), ಇಸಿ–4216, ಬುಂದೇಲ–1,2, ಸಿಒ–5 | 15 ಕೆ.ಜಿ. | ಸಾ:ರಂ:ಪೊ 8:24:20 | ಬಿತ್ತನೆ ನಂತರ ಹಾಗು ಪ್ರತಿ 10 ದಿನಕ್ಕೆ | ಕಾಯಿ ಕಟ್ಟುವ ಹಂತ | 12–15 ಟನ್/ವರ್ಷ | 1 | ಹಸಿರು ಮೇವು:5–6 ಕೆ.ಜಿ |
| ಕುದುರೆ ಮೆಂತೆ | ಪ್ರೋಟಿನ್ ಶೇ. 17.40, ಪಿಷ್ಠ ಶೇ. 40.70, ಕೊಬ್ಬಿನ ಅಂಶ ಶೇ. 1.90, ಲವಣಾಂಶ ಶೇ. 14.20, ನಾರಿನಾಂಶ ಶೇ. 25.90 | ಆನಂದ–2, ಆರ್‌ಎಲ್–88, ಸಿಒ–1, ಟಿ–9 | 6 ಕೆ.ಜಿ | ಸಾ:ರಂ:ಪೊ 10:40:10 | ಬಿತ್ತನೆ ನಂತರ ಹಾಗು ಪ್ರತಿ 10 ದಿನಕ್ಕೆ | 60 ದಿವಸಗಳು | 10–20 ಟನ್/ವರ್ಷ/ ಎಕರೆಗೆ | 8–10 | ಹಸಿರು ಮೇವು:5–6 ಕೆ.ಜಿ |
| ಸ್ಟೈಲೋ ಸ್ಯಾಂಥಸ್ | ಪ್ರೋಟಿನ್ ಶೇ. 10.00, ಪಿಷ್ಠ ಶೇ. 41.70, ಕೊಬ್ಬಿನ ಅಂಶ ಶೇ. 1.90, ಲವಣಾಂಶ ಶೇ. 8.60, ನಾರಿನಾಂಶ ಶೇ. 38.40 | ಹೆಮೆಟಾ ಮತ್ತು ಸ್ಕ್ಯಾಬ್ರಾ | 6 ಕೆ.ಜಿ | ಸಾ:ರಂ:ಪೊ 8:24:20 | ಬಿತ್ತನೆ ನಂತರ ಹಾಗು ಪ್ರತಿ 15 ದಿನಕ್ಕೆ | ಹೂ ಬಿಡುವ ಸಮಯ | 10–12 ಟನ್/ವರ್ಷ/ ಎಕರೆಗೆ | 5–6 | ಹಸಿರು ಮೇವು:5–6 ಕೆ.ಜಿ |



## ರಸಮೇವು ಉತ್ಪಾದನೆ ಮತ್ತು ಉಪಯೋಗ

ಜಾನುವಾರುಗಳಿಗೆ ವರ್ಷಪೂರ್ತಿ ಹಸಿರು ಮೇವು ದೊರಕುವುದು ಕಷ್ಟಕರ ಅದರಲ್ಲಿಯೂ ವಶೇಶವಾಗಿ ಬೇಸಿಗೆಯಲ್ಲಿ ಮೇವಿನ ಕೊರತೆ ತೀವ್ರವಾಗಿರುತ್ತದೆ. ಇದರಿಂದ ಬೇಸಿಗೆಯಲ್ಲಿ ರಾಸುಗಳು ಸೊರಗುತ್ತವೆ. ಆದ್ದರಿಂದ, ಮಳೆಗಾಲದಲ್ಲಿ ಹೇರಳವಾಗಿ ಯಥೇಚ್ಛವಾಗಿ ದೊರಕುವ ಹಸಿರು ಮೇವನ್ನು ಹಾಳಾಗದಂತೆ ವ್ಯವಸ್ಥಿತವಾಗಿ ಹಾಗೂ ಪೌಷ್ಠಿಕಾಂಶ ನಷ್ಟವಿಲ್ಲದೆ ರಸಮೇವಿನ ರೋಪಕ್ಕೆ ಪರಿವರ್ತಿಸಿ ಸಂಗ್ರಹಿಸಿಡುವುದು ಸಮಂಜಸ. ಹೀಗೆ ಶೇಖರಿಸಿದರೆ ಬೇಸಿಗೆ ಕಾಲದಲ್ಲಿ ಉಂಟಾಗುವ ಮೇವಿನ ಕೊರತೆಯನ್ನು ನೀಗಿಸಬಹುದು ಹಾಗೂ ಉತ್ಪಾದನಾ ವೆಚ್ಚವನ್ನು ಆದಷ್ಟು ಕಡಿಮೆ ಮಾಡಬಹುದು.

**ರಸಮೇವು (ಸೈಲೇಜ್):** ಹುಲುಸಾಗಿ ಬೆಳೆದ ಹಸಿಹುಲ್ಲನ್ನು ಗಾಳಿರಹಿತವಾದ ಸ್ಥಳದಲ್ಲಿ ಶೇಕರಿಸಿದ 3 ವಾರಗಳ ನಂತರ ನಿಯಂತ್ರಿತ ರಾಸಾಯನಿಕ ಕ್ರಿಯೆಯಿಂದ ತಯಾರಾದ ಮೇವಿಗೆ ರಸಮೇವು ಎನ್ನುತ್ತಾರೆ. ಮಳೆಗಾಲದಲ್ಲಿ ವಿರಳವಾಗಿ ಬೆಳೆಯುವ ಹಸಿರು ಮೇವನ್ನು ಅಥವಾ ಹಸಿರು ಹುಲ್ಲನ್ನು ಮತ್ತು ಅದರಲ್ಲಿರುವ ಪೌಷ್ಟಕಾಂಶಗಳನ್ನು ನಾಶವಾಗದಂತೆ ಗುಂಡಿಯಲ್ಲಿ (ಭೂಮಿಯೊಳಗೆ ಮಾಡಿದ ಗುಂಡಿಗಳು), ಟ್ರೆಂಚ್‌ಗಳಲ್ಲಿ, ಡ್ರಮ್‌ಗಳಲಿ ಅಥವಾ ಸೈಲೇಜ ಬ್ಯಾಗ್‌ಗಳಲ್ಲಿ ಶೇಖರಿಸಿಟ್ಟು ಹಸಿರು ಮೇವಿನ ಅಭಾವವಿದ್ದಾಅಗ ಅದನ್ನು ಹೈನುರಾಸಗಳಿಗೆ ಉಪಯೋಗ ಮಾಡಿಕೊಳ್ಳಬಹುದು.

ಚಿಕ್ಕ ಪ್ರಮಾಣದಲ್ಲಿ ರಸಮೇವು ತಯಾರಿಸಲು ಪಾಲಿಥೀನ್ ಚೀಲಗಳು, ಸಿಮೆಂಟ್ ಪೈಪು ಅಥವಾ ತೊಟ್ಟಿಗಳು ಮತ್ತು ಪ್ಲಾಸ್ಟಿಕ್ ಡ್ರಮಗಳನ್ನು ಬಳಸಬಹುದು. ಮಳೆಯ ನೀರು ಒಳಗೆ ನುಗ್ಗದ ಜಾಗದಲ್ಲಿ ಗುಂಡಿಗಳನ್ನು ಗುಂಡಾಗಿ ಅಥವಾ ಚೌಕಾಕಾರದಲ್ಲಿ ತೆಗೆಯಬೇಕು. ಗುಂಡಿಗಳ ಅಳತೆಯನ್ನು ಮೇವು ಕೊರತೆಯ ಕಾಲ, ಲಭ್ಯವಿರುವ ಮೇವಿನ ಪ್ರಮಾಣ ಮತ್ತು ಜಾನುವಾರುಗಳ ಸಂಖ್ಯೆಗಳ ಅನುಗುಣವಾಗಿ ನಿರ್ಧರಿಸಬೇಕು. 1 ಮೀಟರ್ ಉದ್ದ, ಅಗಲ ಮತ್ತು ಆಳದ ಅಳತೆಯ ಚೌಕಕಾರದ ಗುಂಡಿಯಲ್ಲಿ ಸರಿ ಸುಮಾರು 400 ಕೆ.ಜಿ ಹಸಿರು ಮೇವಿನ ಸಂಗ್ರಹಣೆ ಸಾಧ್ಯ.

**ರಸಮೇವಿಗೆ ಯೋಗ್ಯವಾದ ಬೆಳೆಗಳು:** ಮುಸುಕಿನ ಜೋಳ, ಜೋಳ, ಸಜ್ಜೆ, ಸೀಮೆಹುಲ್ಲು, ಹೈಬ್ರಿಡ್ ನೇಪಿಯರ್, ಗಿನಿಯಾ ಇತ್ಯಾದಿ ಬಹು ವಾರ್ಷಿಕ ಹುಲ್ಲುಗಳನ್ನು ಬಳಸಬಹುದು.

**ರಸಮೇವು ತಯಾರಿಕೆಗೆ ಬೆಳೆಗಳ ಕಟಾವಿನ ಹಂತ:** ರಸಮೇವುಗಳ ಬೆಳೆಗಳನ್ನು ಹಾಲುಗಾಳು ಇರುವ ಹಂತದಲ್ಲಿ ಕಟಾವು ಮಾಡುವುದು ಉತ್ತಮ. ತೇವಾಂಶ